ಆ) ಆಯವ್ಯಯದಲ್ಲಿ ಹಣ ಮಂಜೂರು ಮಾಡಿ 9 ತಿಂಗಳಾದರೂ ಪ್ರಾರಂಭ ಮಾಡುವ ಬಗ್ಗೆ ಯಾವುದೇ ಕಾರ್ಯಕ್ರಮ ಹಾಕಿಕೊಳ್ಳದೇ ಇರುವ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ?

ಇ) ಕನಿಷ್ಟ 1994ನೇ ಫೆಬ್ರವರಿ 15ನೇ ತಾರೀಖಿನೊಳಗಾದರೂ ಪ್ರಾರಂಭಿಸಲಾಗುವುದೇ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು):

ಅ) 1992-93ನೇ ಸಾಲಿನ ಆಯವ್ಯಯದಲ್ಲಿ ರೂ. 2.50 ಲಕ್ಷಗಳನ್ನು ನೀಡಲಾಗಿದ್ದು ಈ ಹಣವನ್ನು ಕ್ರೀಡಾಂಗಣ ಸಮಿತಿಗೆ ಠೇವಣಿ ಮಾಡಲಾಗಿದೆ.

ಆ) ಪ್ರಸ್ತಾವನೆಗೆ ತಾಂತ್ರಿಕ ಅನುಮೋದನೆ ಮತ್ತು ಆಡಳಿತಾತ್ಮಕ ಅನುಮೋದನೆ ಕಾಯಲಾಗಿರುವುದರಿಂದ ಆನಗತ್ಯ ವಿಳಂಬವಿರುವುದಿಲ್ಲ.

ಇ) ಅಗತ್ಯ ಅನುಮೋದನೆ ದೊರೆತ ಕೂಡಲೇ ಪ್ರಾರಂಭಿಸಲಾಗುವುದು.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕಲ್ಕಂ, ಹೊಸಳ್ಳಿ ಇತ್ಯಾದಿ, ಗ್ರಾಮಗಳ ಕುಡಿಯುವ ನೀರಿನ ಯೋಜನೆ.

178 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕಲ್ಕಂ, ಹೊಸಳ್ಳಿ ಇತ್ಯಾದಿ ಗ್ರಾಮಗಳು ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅದಕ್ಕಾಗಿ ಯೋಜನೆಗಳು ಮಂಜೂರಾಗಿ ಸಹ ಆ ಗ್ರಾಮಗಳ ನಾಗರೀಕರಿಗೆ ಕುಡಿಯುವ ನೀರಿನ ತೊಂದರೆ ನಿವಾರಿಸುವಲ್ಲಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದವರು ವಿಫಲವಾಗಿಲ್ಲವೇ?

ಇ) 2-3 ವರ್ಷಗಳಿಂದಲೂ ಭೂ ವಿಜ್ಞಾನಿಗಳು ಬರುತ್ತಾರೆ, ನೀರಿನ ಮಟ್ಟವನ್ನು ವೀಕ್ಷಿಸುತ್ತಾರೆ ಎಂಬ ವಿಕ ಮಾತ್ರ ಉತ್ತರ ಸಿಗುತ್ತದೆ ಇದು ಕಾರ್ಯರೂಪಕ್ಕೆ ಬರುವುದು ಯಾವಾಗ?

ಈ) ಈಗಲೂ ಸಹ ಈ ಗ್ರಾಮಸ್ಥರು 1-2 ಕಿ.ಮೀ. ಅಂತರದಿಂದ ನೀರನ್ನು ತರುತ್ತಿರುವುದು ನಿಜವಲ್ಲವೇ?

ಉ) ಈ ಗ್ರಾಮದ ಜನರಿಗೆ ಕುಡಿಯುವ ನೀರಿನ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಗಮನಕ್ಕೆ ಬಂದಿದೆ.

ಆ) ಇಲ್ಲ.

ಇ) 1) **ಕಲ್ಕಂ** : ಜಲಮೂಲವನ್ನು ಗುರುತಿಸಲಾಗಿದ್ದು ಜಲಮೂಲವು ಖಾಸಗಿ ಭೂಮಿಯಲ್ಲಿರುವುದರಿಂದ, ಭೂ ಸ್ವಾಧೀನಕ್ಕೆ ಕ್ರಮ ಜರುಗಿಸಲಾಗಿದೆ.

2) **ಹೊಸಳ್ಳಿ** : ಜಲಮೂಲ ಇತ್ಯರ್ಥವಾಗಿದೆ.

ಈ) 1) **ಕಲ್ಕಂ** : ಎರಡು ಕೊಳವೆ ಬಾವಿಗಳು ಗ್ರಾಮದಿಂದ ಒಂದು ಕಿಲೋಮೀಟರ್ ದೂರದಲ್ಲಿದೆ.

2) **ಹೊಸಳ್ಳಿ** : ಒಂದು ಕೊಳವೆ ಬಾವಿ ಗ್ರಾಮದಿಂದ ಒಂದು ಕಿಲೋಮೀಟರ್ ದೂರದಲ್ಲಿದೆ. ಇನ್ನೆರಡು ಕೊಳವೆ ಬಾವಿಗಳು ಗ್ರಾಮದಿಂದ ಅರ್ಧ ಕಿಲೋಮೀಟರ್ ದೂರದಲ್ಲಿವೆ.

1994 ಮಾರ್ಚ್ ಅಂತ್ಯದೊಳಗೆ.

ಚನ್ನಪಟ್ಟಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತಕ್ಕೆ ಹಣಕಾಸಿನ ನೆರವು

87-ಶ್ರೀ ಸಾದತ್‌ಅಲಿಖಾನ್ (ಚನ್ನಪಟ್ಟಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *ಚನ್ನಪಟ್ಟಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ಕಳೆದ ಮೂರು ವರ್ಷಗಳಿಂದ ಬೆಂಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮತ್ತಿತರ ಮೂಲಗಳು ಬ್ಲಾಕ್ಲೋನ್ ಸವಲತ್ತು ಮತ್ತು ಹಣಕಾಸಿನ ನೆರವು ನಿಲ್ಲಿಸಿರುವುದರಿಂದ ಭಾರಿ ನಷ್ಟ ಅನುಭವಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ.*

ಆ) *ಈ ಸಹಕಾರ ಸಂಘ ತನ್ನ ವ್ಯವಹಾರವನ್ನು ಉತ್ತಮಪಡಿಸಿಕೊಳ್ಳಲು ಹಣಕಾಸು ನೆರವು ಕೋರಿ ಸಲ್ಲಿಸಿರುವ ಪ್ರಸ್ತಾವನೆ ಸರ್ಕಾರದಲ್ಲಿ ಬಾಕಿ ಇರುವುದೇ.*

ಇ) *ಹಾಗಿದ್ದರೆ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು);

ಅ) ಇಲ್ಲ.

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಮಲ್ಲೇಶ್ವರಂ ಸಹಕಾರ ಬ್ಯಾಂಕಿನಲ್ಲಿ ನೇಮಕಾತಿಯಲ್ಲಿ ರೋಸ್ಟರ್ ಪದ್ಧತಿ.

116 - ಶ್ರೀ ಗುರುಪಾದಪ್ಪ , ನಾಗಮಾರಪಳ್ಳಿ (ಔರಾದ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *ಬೆಂಗಳೂರು ನಗರದ ಮಲ್ಲೇಶ್ವರಂ ಸಹಕಾರ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು? (ಸಿಬ್ಬಂದಿ ವರ್ಗದ ಹೆಸರು ಹಾಗೂ ಪದನಾಮಗಳ ವಿವರಗಳನ್ನು ನೀಡುವುದು)*

ಆ) *ಅವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಸಂಖ್ಯೆ ಎಷ್ಟು?*

ಇ) *ಆ ಬ್ಯಾಂಕಿನಲ್ಲಿ ನೇಮಕಾತಿ ಮಾಡಿಕೊಳ್ಳುವಾಗ ರೋಸ್ಟರ್ ಪದ್ಧತಿಯನ್ನು ಕಡೆಗಣಿಸಿ ಪರಿಶಿಷ್ಟ ಜಾತಿ-ವರ್ಗದ ಜನರು ಹಾಗೂ ಹಿಂದುಳಿದ ವರ್ಗದ ಜನರಿಗೆ ಅನ್ಯಾಯ ಮಾಡಿರುವುದು ನಿಜವೇ?*

ಈ) *ಹಾಗಿದ್ದಲ್ಲಿ ನೇಮಕಾತಿಯಲ್ಲಿ ಮೀಸಲಾತಿಯನ್ನು ಅನುಸರಿಸಿದ ಆ ಬ್ಯಾಂಕಿನ ಮೇಲೆ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳುವುದೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು);

ಅ) ಒಟ್ಟು 95 ಜನ.

ಹುದ್ದೆವಾರು ಸಿಬ್ಬಂದಿಗಳ ವಿವರ ಅನುಬಂಧ-1 ರಲ್ಲಿ ಮತ್ತು ಸಿಬ್ಬಂದಿವಾರು ವಿವರ ಅನುಬಂಧ-2ರಲ್ಲಿ ನೀಡಿದೆ.